**ದಿನಾಂಕಃ 15.11.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : 1 ನೇ ಪ್ರತಿವಾದಿಯ ಪರ ಶ್ರೀ ಎಚ್.ಎಸ್.ಸಿ. ವಕೀಲರಿಂದಃ**

1. ನಾನು ಈ ದಾವೆಯನ್ನು ಮನೆ ಆಸ್ತಿಯ ಬಗ್ಗೆ ಸಲ್ಲಿಸಿದ್ದೇನೆ. ನಾನು ವಿದ್ಯಾಭ್ಯಾಸ ಮಾಡಿಲ್ಲವಾದ್ದರಿಂದ ಡೋರ್ ನಂಬರ್ ಹೇಳಲು ಗೊತ್ತಿಲ್ಲ. ಈಗ ದಾವಾ ಸ್ವತ್ತಿನಲ್ಲಿ ಮನೆ ಇದೆಯೇ ಅಥವಾ ಖಾಲಿ ಸೈಟು ಇದೆಯೇ? ಎಂದರೆ ನಮ್ಮ ಜಾಗದಲ್ಲಿ ಬೇರೆಯವರು ಮನೆ ಕಟ್ಟಿದ್ದಾರೆ, ಆದ್ದರಿಂದ ದಾವೆ ಹಾಕಿದ್ದೇನೆ. ದಾವಾ ಸ್ವತ್ತಿನ ಅಳತೆ 60 x 45 ಅಡಿಗಳು ಇರುತ್ತದೆ. ಪೂರ್ವ-ಪಶ್ಚಿಮವಾಗಿ 60 ಅಡಿ ಮತ್ತು ಉತ್ತರ - ದಕ್ಷಿಣವಾಗಿ 45 ಅಡಿ ಇರುತ್ತದೆ. ನನಗೆ ದಿಕ್ಕುಗಳ ಪ್ರಕಾರ ಚೆಕ್ಕುಬಂದಿ ಹೇಳಲು ಆಗುವುದಿಲ್ಲ. ಆದರೆ ನನ್ನ ದಾವಾ ಸ್ವತ್ತಿನ ಒಂದು ಗಡಿಯಲ್ಲಿ ಗೂರ ಮರಿಯಪ್ಪ, ಇನ್ನೊಂದು ಗಡಿಯಲ್ಲಿ ತಳವಾರ ಮುದುವಪ್ಪ, ಮತ್ತೊಂದು ಗಡಿಯಲ್ಲಿ ಕೊಟ್ರಪ್ಪನ ಮಗ ದುರುಗಪ್ಪ ಮತ್ತು ಇನ್ನೊಂದು ಗಡಿಯಲ್ಲಿ ರಸ್ತೆ ಇರುತ್ತದೆ. ದಾವಾ ಸ್ವತ್ತು ನನಗೆ ಹೇಗೆ ಬಂದಿತ್ತು? ಎಂದರೆ ಮುಳುಗಡೆಯಾದಾಗ ಸರ್ಕಾರದವರೇ ಜಾಗ ಕೊಟ್ಟು ಮನೆ ಕೂಡಾ ಕಟ್ಟಿಸಿ ಕೊಟ್ಟಿದ್ದರು. ಹೊಳೆ ಬಂದು ಮುಳುಗಡೆಯಾಗುವ ಮುಂಚೆ ನಾವು ಜೋಪಡಿಯಲ್ಲಿ ಇದ್ದೆವು. ಆ ಜೋಪಡಿ ಹಾಕಿದ ಜಾಗ ಯಾರಿಗೆ ಸೇರಿತ್ತೆಂದು ನನಗೆ ಗೊತ್ತಿಲ್ಲ. ನಾನು ಜೋಪಡಿಯಲ್ಲಿ ಯಾವ ವರ್ಷದಿಂದ ಇದ್ದೆ? ಎಂದರೆ ನಾನು ಜೋಪಡಿಯಲ್ಲಿ ಇರುವಾಗ ದುಡಿಯಲು ಊರು ಬಿಟ್ಟು ಹೋಗಿದ್ದೆ. ಜೋಪಡಿಯಲ್ಲಿ ಯಾರೂ ಇರಲಿಲ್ಲ ಆಗ ಬೆಂಕಿ ಹಚ್ಚಿದ್ದರು. ನಾನು ದುಡಿಮೆ ಮಾಡಿಕೊಂಡು ವಾಪಸ್ಸು ಬಂದಾಗ ಜೋಪಡಿಗೆ ಬೆಂಕಿ ಹಾಕಿದ್ದನ್ನು ನೋಡಿದೆ. ನಾನು ಬೆಂಕಿ ಬಿದ್ದ ಜೋಪಡಿಯನ್ನು ಯಾವಾಗ ಬಂದು ನೋಡಿದೆ? ಎಂದರೆ ನನ್ನ ಮಗನನ್ನು ಹಾಸ್ಟೇಲ್ ಗೆ ಸೇರಿಸಿದ್ದೆ. ಅವನು ಬೆಂಕಿ ಬಿದ್ದ ಬಗ್ಗೆ ಪತ್ರ ಬರೆದಿದ್ದರಿಂದ ಅದನ್ನು ಓದಿಕೊಂಡು ವಾಪಸ್ಸು ಬಂದಿದ್ದೆ . ಬೆಂಕಿ ಬಿದ್ದಾಗ ಜೋಪಡಿಯಲ್ಲಿ ನಮ್ಮ ಮನೆಯವರು ಯಾರೂ ಇರಲಿಲ್ಲ. ಜೋಪಡಿಗೆ ಬೆಂಕಿ ಬಿದ್ದ ಬಗ್ಗೆ ನಾನು ದೂರು ಕೊಟ್ಟಿಲ್ಲ. ಜೋಪಡಿಗೆ ಬೆಂಕಿ ಬಿದ್ದ ನಂತರ ಪಂಚಾಯತಿಯವರು ನನಗೆ ಬೇರೆ ಜಾಗ ಕೊಟ್ಟಿದ್ದರು. ಆ ನಿವೇಶನ 30 x 40 ಅಡಿಗಳು ಇರುತ್ತದೆ. ಅದರ ಮತ್ತು ದಾವಾ ಸ್ವತ್ತಿನ ನಡುವೆ ಅಂತರ ಸುಮಾರು 8 ನಿವೇಶನಗಳಷ್ಟು ಇರುತ್ತದೆ. ಮನೆ ಸುಟ್ಟ ನಂತರ ಕೊಟ್ಟ ನಿವೇಶನವನ್ನು ಎಷ್ಟು ವರ್ಷಗಳ ಹಿಂದೆ ಕೊಟ್ಟಿದ್ದರು? ಎಂದರೆ ಸುಮಾರು 20 ವರ್ಷಗಳ ಹಿಂದೆ ಕೊಟ್ಟಿದ್ದರು. ಆಗ ಪಟ್ಟಾ ಕೊಟ್ಟಿದ್ದರು. ಆ ಪಟ್ಟಾವನ್ನು ಹಾಜರು ಮಾಡಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ಆ ಜಾಗಕ್ಕೆ ಒಂದು ಗಡಿಯಲ್ಲಿ ಬಸಪ್ಪ, ಇನ್ನೊಂದು ಗಡಿಯಲ್ಲಿ ನಾಗಪ್ಪ, ಮತ್ತೊಂದು ಗಡಿಯಲ್ಲಿ ರಸ್ತೆ ಮತ್ತು ಇನ್ನೊಂದು ಗಡಿಯಲ್ಲಿ ಟೆಂಗಿ ಮೈಲಾರಪ್ಪನ ಜಮೀನು ಇರುತ್ತವೆ. ಅದು ಪೂರ್ವ-ಪಶ್ಚಿಮವಾಗಿ 40 ಅಡಿ ಮತ್ತು ಉತ್ತರ – ದಕ್ಷಿಣವಾಗಿ 30 ಅಡಿ ಇರುತ್ತದೆ.

2. ನನಗೆ 1 ಮತ್ತು 2 ನೇ ಪ್ರತಿವಾದಿಗಳ ಮನೆಗಳು ಎಲ್ಲಿರುತ್ತವೆ ಎಂದು ಗೊತ್ತೇ ಇಲ್ಲ. ನಾನು ದಾವಾ ಸ್ವತ್ತಿನಲ್ಲಿ ಯಾವಾಗಿನಿಂದ ವಾಸ ಮಾಡುತ್ತಿದ್ದೆ? ಎಂದರೆ ನಾನು ದಾವಾ ಸ್ವತ್ತಿನಲ್ಲಿ ವಾಸ ಮಾಡಿಲ್ಲ. 5 ವರ್ಷಗಳ ಹಿಂದೆ ದುಡಿಯಲು ಹೋಗಿ ವಾಪಸ್ಸು ಬಂದಾಗ 1 ನೇ ಪ್ರತಿವಾದಿ ಗಾಳೆಪ್ಪ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದ. ನಾನು ಆತನನ್ನು ಪ್ರಶ್ನಿಸಿದ್ದಕ್ಕೆ ಆತ ನಿನ್ನ ದಾಖಲೆ ಏನಿದೆ ತೋರಿಸು ಎಂದು ಕೇಳಿದ್ದರಿಂದ ನಾನು ದಾವೆ ಹಾಕಿದೆ. ನಾನು 1 ನೇ ಪ್ರತಿವಾದಿಯನ್ನು ಕೇಳಿ ಎಷ್ಟು ವರ್ಷಗಳಾದವು? ಎಂದರೆ 5 ವರ್ಷ ಆಗಿರುತ್ತದೆ. ದಿನಾಂಕ ಮತ್ತು ತಿಂಗಳು ನಮ್ಮ ಹುಡುಗರಿಗೆ ಗೊತ್ತು. 1 ನೇ ಪ್ರತಿವಾದಿ ನೀನು ಏನು ಮಾಡಿಕೊಳ್ಳುತ್ತೀಯೋ ಮಾಡಿಕೋ ಎಂದು ಹೇಳಿದ್ದ. ಸರ್ಕಾರಿ ಅಧಿಕಾರಿಗಳು ಸ್ಥಳಕ್ಕೆ ಬಂದು ಅಳತೆ ಮಾಡಿದ್ದರೇ? ಎಂದರೆ ಸರ್ಕಾರಿ ಅಧಿಕಾರಿಗಳು

ಬಂದಿದ್ದರು. ಸ್ಥಳವನ್ನು ನೋಡಿ ಅಳತೆ ಮಾಡಿದಾಗ 20 ಅಡಿ ಕಂಡುಬಂತು, 1 ನೇ ಪ್ರತಿವಾದಿ ಗಲಾಟೆ ಮಾಡಿದ್ದರಿಂದ ಅಧಿಕಾರಿಗಳು ನೀವೇ ಏನಾದರು ಮಾಡಿಕೊಳ್ಳಿ ಎಂದು ಹೇಳಿ ಹೋದರು. 1 ನೇ ಪ್ರತಿವಾದಿ ಅಳತೆ ಮಾಡಲು ಬಂದಾಗ ಗಲಾಟೆ ಮಾಡಿದ ಬಗ್ಗೆ ನಾನು ದೂರು ಕೊಟ್ಟಿಲ್ಲ.

**(ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**